ಇ) ಬಿಡಿ ನಿವೇಶನ ಹಂಚಿಕೆಗಾಗಿ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಯ ಪ್ರಕಾರ ಕಲೆ, ವಿಜ್ಞಾನ, ಸಾಹಿತ್ಯ ಕ್ರೀಡೆ, ಸಮಾಜ ಸೇವೆ, ಇತ್ಯಾದಿ ಕ್ಷೇತ್ರದಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಮಹತ್ತರ ಸಾಧನೆ ಗಳಿಸಿದ ವ್ಯಕ್ತಿಗಳಿಗೆ ಒಟ್ಟು ಲಭ್ಯವಿರುವ ಬಿಡಿ ನಿವೇಶನಗಳ ಪೈಕಿ ಶೇಕಡ 20ರಷ್ಟು ಬಿಡಿ ನಿವೇಶನಗಳನ್ನು ಹಂಚಿಕೆಗಾಗಿ ಮೀಸಲಿಡಲಾಗಿದೆ. ಆದ್ದರಿಂದ ಸಾಕಷ್ಟು ನಿವೇಶನಗಳು ಲಭ್ಯವಾಗುವವರೆಗೆ ಈ ಶೇ.20ರ ಕೋಟಾದಲ್ಲಿ ಕ್ರೀಡಾ ಪಟುಗಳಿಂದ ಬಿಡಿ ನಿವೇಶನ ಹಂಚಿಕೆಗಾಗಿ ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ಪುರಸ್ಕರಿಸಲು ಸಾಧ್ಯವಾಗುವುದಿಲ್ಲ.

ವಿಷಯ :-ಕೃಷ್ಣಾ ಮೇಲ್ದಂಡೆ ಯೋಜನೆ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1605 (1156)

ಶ್ರೀ ಮಂಜುನಾಥ ಸಿ.ಕುನ್ನೂರು (ಶಿಗ್ಗಾಂವ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೃಷ್ಣ ಮೇಲ್ದಂಡೆ ಯೋಜನೆಗೆ ಹಾಗೂ ಕೃಷ್ಣಾ ಕಾಲುವೆಗೆ 1994-95ನೇ ಸಾಲಿನಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ.

ಆ) 1994ನೇ ಡಿಸೆಂಬರ್ ನಿಂದ 1995ನೇ ಜುಲೈ ತಿಂಗಳವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?

ಇ)ಈ ಬಗ್ಗೆ ಅಭಿವೃದ್ಧಿ ಕುರಿತು ಸರ್ಕಾರದ ಕ್ರಮವೇನು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು):-

ಅ) 1994-95ನೇ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ 251.5 ಕೋಟಿ ರೂಪಾಯಿಗಳು ಖರ್ಚಾಗಿದ್ದು ಇದರಲ್ಲಿ ಕಾಲುವೆ ಹಾಗೂ ಶಾಖೆಗಳಿಗಾಗಿ 134.84 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಆ) 1994 ಡಿಸೆಂಬರ್ ನಿಂದ 1995 ಜುಲೈ ತಿಂಗಳ ಅಂತ್ಯದವರೆಗೆ ಒಟ್ಟು 181.03 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಇ) ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಸಮಗ್ರವಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಯೋಜನೆಯನ್ನು 2 ಘಟ್ಟಗಳಾಗಿ ವಿಂಗಡಿಸಲಾಗಿದ್ದು ಮೊದಲನೆ ಘಟ್ಟದ ಕಾಮಗಾರಿಗಳನ್ನು ಮೂರು ಹಂತಗಳಲ್ಲಿ ವಿಂಗಡಿಸಲಾಗಿದೆ ಇವುಗಳಲ್ಲಿ ಮೊದಲನೆ ಹಂತದ ಕಾಮಗಾರಿಯು ಮುಕ್ತಾಯಗೊಂಡಿದ್ದು ಎರಡನೇ ಹಾಗೂ ಮೂರನೆ ಹಂತದ ಕಾಮಗಾರಿಗಳು ಪ್ರಗತಿಯಲ್ಲಿವೆ. ಎರಡನೆ ಘಟ್ಟ ಕಾಮಗಾರಿಗಳನ್ನು ಶೀಘ್ರ ಪ್ರಾರಂಭಿಸಲಾಗುವುದು ಹಾಗೂ 2000 ನೇ ಇಸ್ವಿಯ ಮಧ್ಯದ ವೇಳೆಗೆ ಸಂಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ವಿಷಯ :- ಕರ್ನಾಟಕ ರಾಜ್ಯದ ಹೆದ್ದಾರಿ ಡಕಾಯಿತಿಗಳ ಮಾಹಿತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1606 (1157)

ಶ್ರೀ ಮಂಜುನಾಥ ಸಿ.ಕುನ್ನೂರ (ಶಿಗ್ಗಾಂವ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ)ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಯಲ್ಲಿ 1995 ಜನವರಿಯಿಂದ ಈವರೆಗೆ ಎಷ್ಟು ಡಕಾಯಿತಿ ಪ್ರಕರಣಗಳಾಗಿವೆ, (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಗೃಹ ಸಚಿವರು):-

ಅ) ರಾಷ್ಟ್ರೀಯ ಹೆದ್ದಾರಿ - 14
ರಾಜ್ಯ ಹೆದ್ದಾರಿ - 11 (ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿವೆ.)

ಆ) (ಅನುಬಂಧ - ಆ ದಲ್ಲಿ ಲಗತ್ತಿಸಿದೆ)

ಅನುಬಂಧ-ಆ

ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ 1995 ಜನವರಿಯಿಂದ ಈವರೆವಿಗೆ ಆದ ದರೋಡೆ ಪ್ರಕರಣಗಳ ವಿವರ :

ಕ್ರಮ ಸಂಖ್ಯೆ	ಘಟಕ	1995 (ಜನವರಿಯಿಂದ ಇಲ್ಲಿಯವರೆಗೆ) ರಾಷ್ಟ್ರೀಯ	ರಾಜ್ಯ
1	ಬೆಂಗಳೂರು ನಗರ	3	-
2	ಮೈಸೂರು ನಗರ	-	-
3	ಹುಬ್ಬಳ್ಳಿ-ಧಾರವಾಡ ನಗರ		- -
4	ಬೆಂಗಳೂರು ಜಿಲ್ಲೆ	-	3
5	ತುಮುಕೂರು	-	-
6	ಕೋಲಾರ	1	1
7	ಕೆ.ಜಿ.ಎಫ್	-	-
8	ಮೈಸೂರು ಜಿಲ್ಲೆ	-	-
9	ಮಂಡ್ಯ	-	2
10	ಹಾಸನ	-	-
11	ಕೊಡಗು	-	-
12	ಚಿತ್ರದುರ್ಗ	2	2
13	ಶಿವಮೊಗ್ಗ	-	-
14	ಬಳ್ಳಾರಿ	-	-
15	ದಕ್ಷಿಣ ಕನ್ನಡ	-	-
16	ಚಿಕ್ಕಮಗಳೂರು	-	-
17	ಉತ್ತರಕನ್ನಡ	1	-
18	ಬೆಳಗಾವಿ	2	-

19	ಬಿಜಾಪುರ	-	1
20	ಧಾರವಾಡ	4	-
21	ಗುಲ್ಬರ್ಗಾ	-	-
22	ಬೀದರ್	1	2
23	ರಾಯಚೂರು	-	-
	ಒಟ್ಟು	14	11

ಅನುಬಂಧ-ಆ

1) ವಿಶೇಷ ದರೋಡೆ ನಿಯಂತ್ರಣ ದಳಗಳನ್ನು ರಚಿಸಿ, ಮೇಲಿಂದ ಮೇಲೆ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ರಾತ್ರಿ ಗಸ್ತು ನಿರ್ವಹಿಸುತ್ತಿದ್ದು, ಪ್ರತಿ ಪೋಲೀಸ್ ಠಾಣೆಯಿಂದಲೂ ತಮ್ಮ ಸರಹದ್ದಿನಲ್ಲಿ ರಾತ್ರಿ ಗಸ್ತು : ಕಾವಲು ಚುರುಕುಗೊಳಿಸಿ ಡಕಾಯಿತಿ ಪ್ರಕರಣಗಳನ್ನು ನಿಯಂತ್ರಿಸಲಾಗುತ್ತಿದೆ.

2) ನಿರ್ಜನ ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಸಶಸ್ತ್ರ ಸಿಬ್ಬಂದಿಗಳ ಗಸ್ತನ್ನು ಏರ್ಪಡಿಸಲಾಗುತ್ತಿದೆ.

3) ಅಪರಿಚಿತರು ಹಾಗೂ ಸಂಶಯಾಸ್ಪದರನ್ನು ತಪಾಸಣೆ ಮಾಡಲು ನಾಕಾಬಂದಿಯನ್ನು ನಿರಂತರವಾಗಿ ಏರ್ಪಡಿಸಲಾಗುತ್ತಿದೆ.

5) ಅಪರಾಧಿಗಳನ್ನು ಪತ್ತೆಹಚ್ಚಲು ವಿಶೇಷ ತಂಡವನ್ನು ರಚಿಸಿ ಗಡಿಪ್ರದೇಶಗಳಿಗೆ ನಿಯೋಜಿಸಲಾಗುತ್ತಿದೆ.

6) ಗುಪ್ತ ದಳವನ್ನು ಚುರುಕುಗೊಳಿಸಲಾಗಿದೆ, ಹಾಗೂ ಕೆಟ್ಟನಡತೆಯುಳ್ಳವರ ಮೇಲೆ ಹೆಚ್ಚಿನ ನಿಗಾ ಇಡಲಾಗಿದೆ. ಪೊಲೀಸ್ ಸಿಬ್ಬಂದಿಗೆ ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸುವಂತೆ ಸೂಚಿಸಲಾಗಿದೆ.

7) ಡಕಾಯಿತಿ ನಡೆದ ರಸ್ತೆಗಳಲ್ಲಿ ರಾತ್ರಿ ಗಸ್ತನ್ನು ಏರ್ಪಡಿಸಿ ಡಕಾಯಿತಿಗಳನ್ನು ನಿಯಂತ್ರಿಸಲಾಗಿದೆ.

8) ಡಕಾಯಿತಿಗೊಳಗಾದ ಪ್ರದೇಶಗಳಿಗೆ ಹೋಗುವ ಬಸ್ಸುಗಳಲ್ಲಿ ಲೋಹಪರಿಶೋಧಕಗಳನ್ನು ಅಳವಡಿಸುವುದು.

9) ರಾಜ್ಯದ ಗಡಿ ಪ್ರದೇಶದ ಜಿಲ್ಲಾ ಪೊಲೀಸ್ ಅಧಿಕಾರಿಗಳು ನೆರೆಯ ಜಿಲ್ಲೆಯ ಅಧಿಕಾರಿಯನ್ನು ಆಗಾಗ ಸಂಪರ್ಕಿಸಿ ಡಕಾಯಿತಿ ನಿರೋಧಕ ಕ್ರಮಗಳನ್ನು ಕೈಗೊಳ್ಳುವುದು.

10) ಡಕಾಯಿತಿ ತಂಡವು ಅಡಗಿಕೊಂಡ ಸ್ಥಳಗಳಿಗೆ ಸುಸಜ್ಜಿತವಾದ ಪಡೆಯನ್ನು ಕಳುಹಿಸುವುದು.

11) ಡಕಾಯಿತರ ಹಾವಳಿಗೊಳಪಟ್ಟ ಪ್ರದೇಶ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿಸ್ತಂತು ಉಪಕರಣಗಳೊಂದಿಗೆ ತಾತ್ಕಾಲಿಕ ಹೊರ ಠಾಣೆಗಳನ್ನು ಸ್ಥಾಪಿಸುವುದು.

12) ಗ್ರಾಮರಕ್ಷಕ ದಳ ರವರ ಕ್ರಿಯಾಶೀಲ ಸಹಕಾರವನ್ನು ಪಡೆಯುವುದು.

13) ಡಕಾಯಿತಿ ನಿರೋಧಕ ದಳಗಳಿಗೆ ಹೆಚ್ಚಿನ ವಾಹನ ವೈರ್‌ಲೆಸ್ ಉಪಕರಣಗಳನ್ನು ನೀಡಲಾಗಿದ್ದು, ಈ ದಳಗಳು ಡಕಾಯಿತಿ ತಡೆಯಲು ಹಾಗೂ ಹತ್ತಿಕ್ಕಲು ಪರಿಣಾಮಕಾರಿಯಾಗಿ ಶ್ರಮಿಸುತ್ತಿವೆ.

14) ರಾತ್ರಿ ವೇಳೆ ಪ್ರಯಾಣಿಸುವ ಪ್ರಯಾಣಿಕರಿಗೆ ಅವರ ಪ್ರಾಣ ಮತ್ತು ಆಸ್ತಿಪಾಸ್ತಿಗಳಿಗೆ ರಕ್ಷಣೆ ನೀಡಲು ಹಾಗೂ ರಾತ್ರಿ ವೇಳೆ ಸಂಚರಿಸುವ ಸರಕು ವಾಹನಗಳಿಗೆ ಸೂಕ್ತ ರಕ್ಷಣೆ ನೀಡಲು ರಸ್ತೆ ಮೇಲೆ ಹೆಚ್ಚಿನ ಗಸ್ತನ್ನು ಏರ್ಪಡಿಸಲಾಗಿದೆ.

ವಿಷಯ: ಸರ್ಕಾರದ ಇಲಾಖೆಗಳಲ್ಲಿ ಖಾಲಿ ಇರುವ IIIನೇ ದರ್ಜೆ ಹುದ್ದೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1607(2113)

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಖಾಲಿ ಇರುವ IIIನೇ ದರ್ಜೆ ಹುದ್ದೆಗಳ ಸಂಖ್ಯೆ;

ಆ) ಖಾಲಿ ಇರುವ ಈ ಹುದ್ದೆಗಳಿಂದ ಉಂಟಾಗುತ್ತಿರುವ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳು.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):-

ಅ)ಸಚಿವಾಲಯದ ವಿವಿಧ ಇಲಾಖೆಗಳಲ್ಲಿ 554 'ಸಿ' ಗುಂಪಿನ ಹುದ್ದೆಗಳು.

ಆ) ಅವಶ್ಯವಿರುವ ಪ್ರಕರಣಗಳಲ್ಲಿ ಆರ್ಥಿಕ ಮಿತವ್ಯಯವನ್ನು ಸಡಿಲಿಸಿ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ: ಮದ್ದೂರು ತಾಲ್ಲೂಕಿನಲ್ಲಿ ಕೆರೆಯ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1608 (1908)

ಶ್ರೀ ಕೆ.ಎನ್.ನಾಗೇಗೌಡ (ಕಿರುಗಾವಲು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಯಾಲದಹಳ್ಳಿ ಕೆರೆ ಸುಜ್ಜಲೂರು ಕಡಿವಾಗಿಲು ಕೆರೆಗಳನ್ನು ಯಾವಾಗ ಮಂಜೂರು ಮಾಡಲಾಯಿತು (ಮಳವಳ್ಳಿ ತಾಲ್ಲೂಕು)

ಆ) ಹಾಗಿದ್ದಲ್ಲಿ ಈ ಮೂರು ಕೆಲಸಗಳು ಯಾವ ಹಂತದಲ್ಲಿರುತ್ತವೆ?

ಇ) ಇಷ್ಟು ತಡವಾಗಲು ಕಾರಣಗಳೇನು?

ಈ) ಯಾವಾಗ ಮುಗಿಸಲಾಗುವುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):

ಅ)ಅ) ಯಾಲದಹಳ್ಳಿ ಕೆರೆ ಸುಧಾರಣೆ ಕೆಲಸಗಳು 1994-95 ರಲ್ಲಿ ರೂ. 8.38 ಲಕ್ಷಕ್ಕೆ ಮಂಜೂರು ಮಾಡಲಾಗಿದೆ.

ಆ) ಸುಜ್ಜಲೂರು ಕೆರೆ ಸುಧಾರಣೆ ಕೆಲಸಗಳು 1993-94 ರಲ್ಲಿ ರೂ. 16.30 ಲಕ್ಷಕ್ಕೆ ಮಂಜೂರು ಮಾಡಲಾಗಿದೆ.

ಇ) ಕಡಿವಾಗಿಲು ಕೆರೆ ಸುಧಾರಣೆ ಕೆಲಸಗಳು 1993-94 ರಲ್ಲಿ ರೂ.2.35 ಲಕ್ಷಕ್ಕೆ ಮಂಜೂರು ಮಾಡಲಾಗಿದೆ.

ಆ)ಅ) ಯಾಲದಹಳ್ಳಿ ಕೆರೆ: ಎರಡು ಟೆಂಡರ್ ಕರೆಗಳು ನರರ್ಥಕವಾದುದರಿಂದ ಇಲಾಖಾ ನಿಯಮಗಳ ರೀತ್ಯಾ ನೇರವಾಗಿ ಗುತ್ತಿಗೆದಾರರಿಗೆ ಕೆಲಸ ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.